ಉಡುಪಿ ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ ರಜತಾದ್ರಿ
ಮಣಿಪಾಲ ಉಡುಪಿ ಜಿಲ್ಲೆ

ಆಶಾ:ಮೀಟಿಂಗ್ ನಡವಳಿ:12(15):2015-16 ದಿನಾಂಕ:18-03-2016

ವಿಷಯ:-ಶಿಕ್ಷಕರಿಗೆ ಮಂಜೂರು ಮಾಡುತ್ತಿರುವ ಸೌಲಭ್ಯಗಳ ಕುರಿತಂತೆ

-******-

ವಿಷಯವನ್ನಾಧರಿಸಿ ಡಿಸೆಂಬರ್ ತಿಂಗಳಲ್ಲಿ ಈ ಕಛೇರಿಯಲ್ಲಿ ನಡೆದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಪತ್ರಾಂಕಿತ ವ್ಯವಸ್ಥಾಪಕರ ಸಭೆಯ ನಡವಳಿಯಂತೆ ಈ ಜಿಲ್ಲೆಯಲ್ಲಿ ವರದಿ ವರ್ಷದಲ್ಲಿ ಹಾಗೂ ಹಿಂದಿನ ಐದು ವರ್ಷಗಳಲ್ಲಿ ಇದೇ ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೆ ಆ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರುಗಳಿಗೆ ಕಾಲಮಿತಿ ಬಡ್ತಿ/ಸ್ವಯಂಚಾಲಿತ ಬಡ್ತಿ ಹೆಚ್ಚುವರಿ ಬಡ್ತಿ ಹಾಗೂ ಸ್ಥಗಿತ ವೇತನ ಬಡ್ತಿಗೆ ಸಂಬಂದಿಸಿ ಶಿಕ್ಷಕರುಗಳಿಗೆ ಕಾರ್ಯ ನಿರ್ವಹಣಾ ವರದಿಗಾಗಿ ಒತ್ತಾಯಿಸದೇ ಸೇವಾ ಪುಸ್ತಕದಲ್ಲಿ ದಾಖಲಿಸಿದ ವಿವರಗಳನ್ನು ಗಮನಿಸಿ ಶಿಕ್ಷಕರುಗಳ ಮೇಲೆ ಯಾವುದೇ ದೂರು ಇಲ್ಲದಿರುವ ಪ್ರಕರಣಗಳಲ್ಲಿ ವಿಶೇಷ ವರದಿಯೊಂದಿಗೆ ಪ್ರಸ್ತಾವನೆಯನ್ನು ತಮ್ಮ ಹಂತದಲ್ಲಿ ಪುರಸ್ಕರಿಸಲು ಸೂಚಿಸಲಾಗಿತ್ತು.ಹೀಗಿದ್ದಾಗ್ಯೂ ಕೆಲವು ವಲಯಗಳಲ್ಲಿ ಕಾರ್ಯನಿರ್ವಹಣಾ ವರದಿಗಾಗಿ ಒತ್ತಾಯಿಸುತ್ತಿರುವುದು ಗಮನಕ್ಕೆ ಬಂದಿದ್ದು ಶಿಕ್ಷಕರು ತಮ್ಮ ಅಮೂಲ್ಯವಾದ ಶಾಲಾ ಸಮಯದಲ್ಲಿ ಈ ವರದಿಗಳಿಗಾಗಿಎಡತಾಕುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ಹಿನ್ನಲೆಯಲ್ಲಿ ಇಂತಹ ಪ್ರಕರಣಗದಲ್ಲಿ ಕಾರ್ಯ ನಿರ್ವಹಣಾ ವರದಿಗಾಗಿ ಶಿಕ್ಷಕರುಗಳನ್ನು ಒತ್ತಾಯಿಸದೇ ವಿಶೇಷ ವರದಿಯೊಂದಿಗೆ ಮೇಲ್ಕಂಡ ಮಂಜೂರಾತಿಗೆ ಸಂಬಂದಿಸಿ ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಎಚ್ ದಿವಾಕರ ಶೆಟ್ಟಿ
ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಉಡುಪಿ ಜಿಲ್ಲೆ

ರಿಗೆ
ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
ಪ್ರತಿಯನ್ನು
1.ಅಧ್ಯಕ್ಷರು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಉಡುಪಿ ಇವರಿಗೆ ಕಳುಹಿಸುತ್ತಾ ವಲಯದ ಸಂಘಗಳಿಗೆ ತಿಳಿಸುವಂತೆ ಸೂಚಿಸಿದೆ
2.ಈ ಕಛೇರಿಯ ಬಿ2.ಎ2ಎ1 ವಿಭಾಗಗಳಿಗೆ ಸೂಕ್ತ ಕ್ರಮಕ್ಕಾಗಿ